ಆಸ್ಪತ್ರೆಗಳಲ್ಲಿ ಯಾರೂ ಇರುವುದಿಲ್ಲ. ಅವರು ಎಲ್ಲಿಗೆ ಹೋಗಿದ್ದಾರೆ, ಯಾರನ್ನು ಕೇಳಬೇಕೆಂದು ನಮಗೆ ಅರ್ಥವಾಗುತ್ತಿಲ್ಲ. Such is the situation now.

ಶ್ರೀ ಯು.ಆರ್. ಸಭಾಪತಿ : ಉಪಾಧ್ಯಕ್ಷರೇ, ಈಗಾಗಲೇ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಎಲ್ಲಾ ಆಸ್ಪತ್ರೆಗಳಲ್ಲಿ ಕೊಟ್ಟಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ : ನಿಮ್ಮಲ್ಲಿ ಆ ವ್ಯವಸ್ಥೆ ಇರಬಹುದು. ನಮ್ಮಲ್ಲಿ ಹಾಗೆ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಏನಾಗಿದೆ ಎಂದರೆ ಇದು ನಾನ್ ಕ್ಲಿನಿಕಲ್ ಸರ್ವಿಸ್. ಇದರಲ್ಲಿ 50 ಪರ್ಸೆಂಟ್ 'ಡಿ' ಗ್ರೂಪ್ ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ಕಾಂಟ್ರಾಕ್ಟ್ ಕೊಟ್ಟು ಮಾಡಿಸಬೇಕೆಂದು ಹಿಂದೆ ಆಜ್ಞೆಯನ್ನು ಹೊರಡಿಸಿದ್ದೆವು. ಆದರೆ ಇದು ಸ್ವಲ್ಪ ಫೀಸಿಬಲ್ ಅಲ್ಲವೆಂದು ಹೇಳಿ ಗೊತ್ತಾಗಿದ್ದರಿಂದ 30 ಪರ್ಸೆಂಟ್ ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ಸಾಕು ಎಂದು ಮೊನ್ನೆ ಹೊಸದಾಗಿ ಆಜ್ಞೆಯನ್ನು ಮಾಡಿದ್ದೇನೆ. ಅದರ ಬೇಸಿಸ್ ಮೇಲೆ ಇವತ್ತು ಎಲ್ಲರೂ ಟೆಂಡರ್ ಕರೆದು ನಾನ್ ಕ್ಲಿನಿಕಲ್ ಸರ್ವಿಸ್‌ನಲ್ಲಿ ನೇಮಕ ಮಾಡಬೇಕೆಂದು ಹೇಳಿದ್ದೇನೆ. ನಿಮ್ಮಲ್ಲಿ ಮಾಡದೇ ಹೋದರೆ ಇವತ್ತೇ ಹೇಳಿ, ಏಕೆ ಮಾಡಿಲ್ಲವೆಂದು ನಾನು ಕೇಳುತ್ತೇನೆ.

ಉಪಾಧ್ಯಕ್ಷರು : ಮಂತ್ರಿಗಳು ಕ್ಯಾಬಿನೆಟ್ ಮೀಟಿಂಗ್‌ಗೆ ಹೋಗಬೇಕು. ಅದಕ್ಕೋಸ್ಕರ ನಿಮಗೆ ನಿಲ್ಲಿಸಿ ಎಂದು ಹೇಳುತ್ತಿದ್ದೇನೆ. ಒಂದು ಗಂಟೆಕಾಲ ತಾವು ಸಾಕಷ್ಟು ಮಾತನಾಡಿದ್ದಿರಿ. ಮುಗಿಸಿಬಿಡಿ.

ಶ್ರೀ ಬಿ.ಎನ್. ಬಚ್ಚೇಗೌಡ : ಇನ್ನೂ ಬಹಳಷ್ಟು ಬೇಡಿಕೆಗಳು ಬಾಕಿ ಇದ್ದವು. ಆದರೆ ನನಗೆ ಅವಕಾಶ ಸಿಕ್ಕಿದ್ದು ಮೂರು-ನಾಲ್ಕು ವಿಷಯಗಳ ಮೇಲೆ ಮಾತನಾಡುವುದಕ್ಕೆ ಮಾತ್ರ. ಇವುಗಳ ಬಗ್ಗೆ ನಾನು ಕೆಲವು ನನ್ನ ಸಲಹೆಗಳನ್ನು ಕೊಟ್ಟಿದ್ದೇನೆ. ಇನ್ನೂ ಅನೇಕ ಇಲಾಖೆಗಳ ಬಗ್ಗೆ ಮಾತನಾಡಲಿಕ್ಕೆ ಇದೆ. ತಾವು ಬೇರೆ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ನನಗೆ ತಾವು ಚರ್ಚೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4) ಪ್ರಕಟಣೆ

ವಿಷಯ:- ಸದನದಲ್ಲಿ ಮೊಬೈಲ್ ಫೋನ್ ಸ್ವಿಚ್ ಆಫ್ ಮಾಡದೇ ಇರುವುದಕ್ಕೆ ದಂಡ ವಿಧಿಸುವ ಬಗ್ಗೆ:

ಉಪಾಧ್ಯಕ್ಷರು : ಇಗ ಇದು ಒಂದು ಮೊಬೈಲ್ ಸದ್ದು ಮಾಡಿದ್ದು ಎಲ್ಲರಿಗೂ ಗೊತ್ತಾಗಿದೆ. ಹಿಂದೆ ನಾವು ಸೂಚನೆಯನ್ನು ಕೊಟ್ಟಿದ್ದೇವೆ. ಮೊಬೈಲ್‌ನ್ನು ತಂದರೂ ಕೂಡ ಅದನ್ನು ಸ್ವಿಚ್ ಆಫ್ ಮಾಡಿರಬೇಕು, ಸದನದಲ್ಲಿ ಅದು ಸದ್ದು ಮಾಡಬಾರದು ಎಂದು ಸೂಚನೆ ಕೊಟ್ಟಿದ್ದರೂ ಕೂಡ ಇದೊಂದು ಮೊಬೈಲ್ ಬಹಳಷ್ಟು ಸದ್ದು ಮಾಡಿದ್ದುದ್ದು ಎಲ್ಲರಿಗೂ ಗೊತ್ತಾಗಿದೆ....

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಉಪಾಧ್ಯಕ್ಷರೇ, ನಮ್ಮವರೊಬ್ಬರಿಗೆ ಆಕ್ಸಿಡೆಂಟ್ ಆಗಿದೆ ಎಂದು ಚೀಟಿ ಬರೆದು ಕಳುಹಿಸಿದ್ದರು. ಆಚೆ ಹೋಗುವಾಗ ನಾನು ಮರೆತುಬಿಟ್ಟೆ. ದಯವಿಟ್ಟು ಕ್ಷಮಿಸಿ.

ಉಪಾಧ್ಯಕ್ಷರು : ಆದರೆ ಅದು ಸ್ವಿಚ್ ಆಫ್ ಆಗಿರಲಿಲ್ಲ.

ಶ್ರೀ ಸಿ. ಚೆನ್ನಿಗಪ್ಪ : ನಾನು ಮರೆತಿದ್ದೆ. ಎಂ.ಎಲ್.ಎ.ಗಳ ಜೀವನ ಬಹಳ ಕಷ್ಟ. ಇದು ನಾನು ಬೇಕೆಂದು ಮಾಡಿದ್ದು ಅಲ್ಲ.....

ಉಪಾಧ್ಯಕ್ಷರು : ಆದ್ದರಿಂದ ಇನ್ನು ಮುಂದೆ ಯಾವ ಸದಸ್ಯರೂ ಕೂಡ ಈ ರೀತಿ ಮಾಡಬಾರದು ಅಂತ ಹೇಳಿ ಈ ಮೊಬೈಲ್ ಮಾಲೀಕರಿಗೆ ಒಂದು ನೂರು ರೂಪಾಯಿ ಫೈನ್ ಹಾಕಿದ್ದೇವೆ. ಅವರು ಅದನ್ನು ಪಾವತಿ ಮಾಡಿ ನಂತರ ತೆಗೆದುಕೊಂಡು ಹೋಗಬಹುದು. ಈಗ ಸದನವನ್ನು ನಾಳೆ ಬೆಳಿಗ್ಗೆ 10–30 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ ಆರು ಗಂಟೆಗೆ ಮುಂದೂಡಲ್ಪಟ್ಟು ಪುನಃ ದಿನಾಂಕ 25ನೇ ಜುಲೈ ಮಾಹೆ 2003ರ ಶುಕ್ರವಾರದಂದು ಬೆಳಿಗ್ಗೆ 10–30 ಗಂಟೆಗೆ ಸೇರಲು ನಿಶ್ಚಯಿಸಿತು)

5) ಅನುಬಂಧ – I

ಲಿಂಗಸೂಗೂರ ತಾಲ್ಲೂಕಿನಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ

3618(4166) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯ ಲಿಂಗಸಗೂರ ತಾಲ್ಲೂಕಿನ ಮೊರಾರ್ಜಿ ವಸತಿ ಶಾಲೆಯ ನಿರ್ಮಾಣದ ಕಾಮಗಾರಿಯು ಯಾವ ಹಂತದಲ್ಲಿದೆ;

ಆ) ಸದರಿ ಕಟ್ಟಡದ ಕಾಮಗಾರಿಗೆ ಇಲ್ಲಿಯವರೆಗೆ ಮಾಡಿದ ವೆಚ್ಚವೆಷ್ಟು; ಹಾಗೂ ಮುಕ್ತಾಯವಾಗುವುದು ಯಾವಾಗ; ಕಟ್ಟಡದ ಕಾಮಗಾರಿಯು ಮುಕ್ತಾಯವಾಗಿದ್ದಲ್ಲಿ, ಯಾವಾಗ ಉದ್ಘಾಟನೆಯನ್ನು ಮಾಡಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಕಟ್ಟಡದ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಕಟ್ಟಡಕ್ಕೆ ವಿದ್ಯುಚ್ಛಕ್ತಿ ಸಂಪರ್ಕ ಮತ್ತು ಇತರೇ ಮೂಲಭೂತ ಸೌಕರ್ಯದ ಕಾಮಗಾರಿ, ಸಂಪರ್ಕ ರಸ್ತೆ ನಿರ್ಮಾಣವಾಗಬೇಕಾಗಿದೆ.

ಆ) ರೂ. 145.66 ಲಕ್ಷಗಳು ವೆಚ್ಚವಾಗಿರುತ್ತದೆ. ಈ ಕಟ್ಟಡದ ಕಾಮಗಾರಿಯು ಅಕ್ಟೋಬರ್ 2003ರಲ್ಲಿ ಉದ್ಘಾಟನೆಯಾಗಲಿದೆ.

ಲಿಂಗಸಗೂರು ತಾಲ್ಲೂಕಿನಲ್ಲಿನ ರೇಷ್ಮೆ ಫಾರ್ಮ್‌ಗಳನ್ನು ಖಾಸಗಿಯವರಿಗೆ ವಹಿಸುವುದು

3619(4167) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ರೇಷ್ಮೆ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಫಾರ್ಮ್‌ಗಳನ್ನು ಖಾಸಗಿಯವರಿಗೆ ನೋಡಿಕೊಳ್ಳಲು ವಹಿಸಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಲಿಂಗಸಗೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಕೆಸರಹಟ್ಟಿ–ಕನ್ನಾಪುರ ರೇಷ್ಮೆ ಫಾರ್ಮ್‌ಗಳನ್ನು ಪುನರ್ ಸಂಘಟನೆಗಾಗಿ ಖಾಸಗಿಯವರಿಗೆ ವಹಿಸಿಕೊಡಲಾಗಿದೆಯೇ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಮೀನು ಮರಿಗಳ ಉತ್ಪಾದನೆ ಹೆಚ್ಚಳ

3620(4361) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನೂ ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)